14. ಶ್ರವಣೋಪಕರಣಗಳಲ್ಲದೆ, ಇತರೆ ಉಪಕರಣಗಳಿವೆ. ಉದಾಹರಣೆಗೆ, ಟಿ.ವಿ. ಕೇಳಲು ಸಹಾಯ ಮಾಡುವ ಉಪಕರಣಗಳು, ವಿಶೇಷ ಅಲಾರಂ ಗಡಿಯಾರಗಳು ಹಾಗೂ ದೂರವಾಣಿ ವರ್ಧಕಗಳು ಇವುಗಳನ್ನು ಶ್ರವಣ ಸಹಾಯಕ ಉಪಕರಣಗಳೆನ್ನುತ್ತೇವೆ.




**ನಿಮ್ಮಲ್ಲಿ ಯಾವುದೇ ಪ್ರಶ್ನೆಗಳು/ ಸಲಹೆಗಳಿದ್ದಲ್ಲಿ ಅಥವಾ ಯಾವುದೇ ಸಹಕಾರ ಬೇಕಿದ್ದಲ್ಲಿ ನಮ್ಮನ್ನು ಸಂಪರ್ಕಿಸಿ.**

**ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ**

ಮಾನಸಗಂಗೋತ್ರಿ, ಮೈಸೂರು 570 006

**ದೂರವಾಣಿ** : 0821 2514449 / 2514618

**ಫ್ಯಾಕ್ಸ್** : 0821 2510515

**ಇ ಮೇಲ್** : director@aiishmysore.in

**ಕೆಲಸದ ವೇಳೆ** : ಬೆಳಗ್ಗೆ 9-00 ರಿಂದ ಸಂಜೆ 5-30 ರವರೆಗೆ

ಸೋಮವಾರದಿಂದ - ಶುಕ್ರವಾರದವರೆಗೆ

(ಕೇಂದ್ರ ಸರ್ಕಾರದ ರಜಾ ದಿನಗಳನ್ನು ಹೊರತುಪಡಿಸಿ)




# ಶ್ರವಣೋಪಕರಣ ಉಪಯೋಗಿಸುವ ವ್ಯಕ್ತಿಯ ಕುಟುಂಬಕ್ಕೆ ಕೆಲವು ಸಲಹೆಗಳು


**ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ**

ಮಾನಸಗಂಗೋತ್ರಿ, ಮೈಸೂರು - 570 006

## ಶ್ರವಣೋಪಕರಣ ಉಪಯೋಗಿಸುವ ವ್ಯಕ್ತಿಯ ಕುಟುಂಬಕ್ಕೆ ಕೆಲವು ಸಲಹೆಗಳು

ಶ್ರವಣದೋಷವು ವ್ಯಕ್ತಿಯ ಜೀವನದ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ಶ್ರವಣೋಪಕರಣ ಇದ್ದರೂ ಸಹ ಕೇಳಿಸುವುದು ಕೆಲವೊಮ್ಮೆ ಕಷ್ಟಕರವಾಗಬಹುದು. ಶ್ರವಣೋಪಕರಣ ಉಪಯೋಗಿಸುವ ವ್ಯಕ್ತಿ ಸರಿಯಾಗಿ ಕೇಳಿಸಿಕೊಳ್ಳಲು ಗಮನಹರಿಸಬೇಕು. ಈ ತೊಂದರೆ ಇರುವ ವ್ಯಕ್ತಿಗೆ, ಇತರರು ಮಾತನಾಡುವುದು ಸರಿಯಾಗಿ ಅರ್ಥವಾಗುವುದಿಲ್ಲ ಹಾಗೂ ಸರಿಯಾದ ರೀತಿಯಲ್ಲಿ ಪ್ರತಿಕ್ರಿಯಿಸಲು ಆಗುವುದಿಲ್ಲ ಎಂಬ ಭಯವಿರುತ್ತದೆ. ಈ ರೀತಿಯಾದಾಗ ಆ ವ್ಯಕ್ತಿ ತುಂಬಾ ಒತ್ತಡಕ್ಕೆ ಒಳಗಾಗುತ್ತಾನೆ. ಶ್ರವಣೋಪಕರಣಕ್ಕೆ ಸರಿಯಾಗಿ ಹೊಂದಿಕೊಳ್ಳಲು ಕೆಲವು ವಾರಗಳು ಅಥವಾ ಕೆಲವು ತಿಂಗಳುಗಳು ಬೇಕಾಗುತ್ತದೆ. ಇಷ್ಟಾದರೂ ಆ ವ್ಯಕ್ತಿಯು ಕೇಳಿಸಿಕೊಳ್ಳುವುದರ ಜೊತೆಗೆ ಮಾತನಾಡುವವರ ಮುಖವನ್ನು ಗಮನಿಸಬೇಕಾಗುತ್ತದೆ. ಒಬ್ಬ ಕುಟುಂಬ ಸದಸ್ಯನಾಗಿ ಅಥವಾ ಗೆಳೆಯನಾಗಿ ಈ ಕೆಳಗಿನ ಕೆಲವು ಸಲಹೆಗಳನ್ನು ಪಾಲಿಸಬೇಕು. ಇದರಿಂದ ಶ್ರವಣಸಾಧನ ಉಪಯೋಗಿಸುವ ವ್ಯಕ್ತಿಗೆ ಕಿವಿ ಕೇಳಿಸಲು ಸಹಕಾರಿಯಾಗುತ್ತದೆ.

1. ಶ್ರವಣಸಾಧನ ಧರಿಸುವ ವ್ಯಕ್ತಿಯ ಜೊತೆ ಮಾತನಾಡುವಾಗ ಅವರ ಎದುರಿಗೆ ನಿಂತು ಅಥವಾ ಕುಳಿತುಕೊಂಡು ಮಾತನಾಡಿ.



2. ಶ್ರವಣಸಾಧನ ಧರಿಸುವ ವ್ಯಕ್ತಿಯು ಮಾತನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು, ಮಾತನಾಡುವವರ ಮುಖವನ್ನು ನೋಡಬೇಕಾಗುತ್ತದೆ. ಬೆಳಕು ಚೆನ್ನಾಗಿರಬೇಕು. ಮಾತನಾಡುವವರ ಮುಖದ ಮೇಲೆ ನೇರವಾಗಿ ಬೆಳಕು ಬೀಳಬೇಕು. ಇದರಿಂದ ಅವರು ಮುಖದ ಮತ್ತು ತುಟಿಯ ಚಲನೆಗಳನ್ನು ಗಮನಿಸಲು ಸಹಕಾರಿಯಾಗುತ್ತದೆ.
3. ಸ್ಪಷ್ಟವಾಗಿ ಮಾತನಾಡಬೇಕು, ವಾಕ್ಯದಲ್ಲಿ ಹೆಚ್ಚಿನ ಅರ್ಥವುಳ್ಳ ಸ್ಥಳಗಳಲ್ಲಿ ನಿಧಾನವಾಗಿ ಮಾತನಾಡಿ.
4. ಶ್ರವಣೋಪಕರಣ ಧರಿಸುವ ವ್ಯಕಿಯ ಜೊತೆ ಜೋರಾಗಿ ಅಥವಾ ಕೂಗಿ ಮಾತನಾಡಬೇಡಿ. ಇದರಿಂದ ಕಿವಿ ನೋವಾಗಬಹುದು.



5. ಜೋರಾಗಿ ಕೂಗಿದ್ದಲ್ಲಿ, ಮಾತು ಬೇರೆ ತರಹ ಕೇಳಿಸುವ ಸಂಭವವಿರುತ್ತದೆ. ಹಾಗೂ ಮುಖದ ಭಾವಗಳನ್ನು ತಪ್ಪಾಗಿ ತಿಳಿಯುವ ಸಾಧ್ಯತೆ ಕೂಡಾ ಇರುತ್ತದೆ.
6. ಶ್ರವಣಸಾಧನ ಧರಿಸುವ ವ್ಯಕ್ತಿಯ ಜೊತೆ ಮಾತನಾಡುವ ಮೊದಲು ಅವರ ಹೆಸರನ್ನು ಕರೆದು ಅಥವಾ ಭುಜವನ್ನು ತಟ್ಟಿ ಅವರ ಗಮನ ಸೆಳೆದು ನಂತರ ಮಾತನಾಡಲು ಪ್ರಾರಂಭಿಸಬೇಕು.



7. ನೀವು ಮಾತನಾಡುವ ಸಂಧರ್ಭದಲ್ಲಿ, T.V ಶಬ್ದವನ್ನು ಕಡಿಮೆ ಮಾಡಬೇಕು. T.V, ಮಿಕ್ಸರ್ ಹಾಗೂ ರೇಡಿಯೋ ಉಪಯೋಗಿಸುವಾಗ ಮಾತನಾಡತಕ್ಕದ್ದಲ್ಲ.
8. ಮುಖ್ಯವಾದ ಸಂದೇಶ, ದೂರವಾಣಿ ಸಂಖ್ಯೆ ಹಾಗೂ ಹೆಸರುಗಳನ್ನು ಬರೆದಿಡಬೇಕು.
9. ಸಹಜವಾಗಿ ಮಾತನಾಡಬೇಕು ಅಧಿಕವಾಗಿ ತುಟಿ ಚಲಿಸಬೇಕಾಗಿಲ್ಲ. ಅಗತ್ಯವಿದ್ದಲ್ಲಿ ಮಾಮುಲಿಗಿಂತ ಸ್ವಲ್ಪ ನಿಧಾನವಾಗಿ ಮಾತನಾಡಿ.
10. ಬೇರೆ ಕೊಠಡಿಯಿಂದ ಮಾತನಾಡಬೇಡಿ. ಏಕೆಂದರೆ ನೀವು ಅವರಿಗೆ ಕಾಣಿಸುವುದಿಲ್ಲ.
11. ವ್ಯಕ್ತಿ ಹುಷಾರಿಲ್ಲದಿರುವಾಗ ಅಥವಾ ನಿಶಕ್ತಿ ಆಗಿದ್ದಲ್ಲಿ ಮಾತು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಕಡಿಮೆಯಾಗುತ್ತದೆ.




12. ಆ ವ್ಯಕ್ತಿಗೆ ರವಾನಿಸಿದ ಸಂದೇಶ ಅರ್ಥವಾಗದಿದ್ದಲ್ಲಿ ಅವರ ಹತ್ತಿರ ಹೋಗಿ ಆ ಸಂದೇಶವನ್ನು ಮತ್ತೆ ಸರಳ ಶಬ್ದ ಉಪಯೋಗಿಸಿ ಹೇಳಿ.
13. ಶ್ರವಣಸಾಧನ ಉಪಯೋಗಿಸುವ ವ್ಯಕ್ತಿಗೆ ನೀವು ವಿವಿಧ ಸಂದರ್ಭಗಳಿಗೆ (ಗದ್ದಲವಿರುವಾಗ, ಶಾಂತವಾದ ಸಂಧರ್ಭದಲ್ಲಿ ಇತ್ಯಾದಿ) ಸರಿಯಾದ ಪ್ರೋಗ್ರಾಂ ಆಯ್ಕೆ ಮಾಡಲು ಹೇಳಿಕೊಡಬೇಕು.